ಇದೆಲ್ಲಾ ಪ್ರೊಫೆಸರರ ಕೃತ್ಯವೇ ಇರಬೇಕೆಂಬ ಸಣ್ಣ ಸಂದೇಹ ಮೂಡಿದರೂ ನನಗೆ ಸಂಪೂರ್ಣವಾಗಿ ಅದನ್ನು ನಂಬಲಾಗಲಿಲ್ಲ. ಯಾಕೆ? ಯಾಕೆ? ನಾನೇನು ತಪ್ಪು ಮಾಡಿದೆ? ಕಾರಣವೇನು?

ವಸುಂಧರೆಯ ತಲೆಯನ್ನು ನಿಧಾನವಾಗಿ ಎತ್ತಿ ನೆಲದ ಮೇಲೆ ಇಟ್ಟು ಎದ್ದೆ. ಅವಸರವಸರವಾಗಿ ಫ್ಲ್ಯಾಟಿನ ಬಾಗಿಲಿನ ಬೀಗ ಹಾಕಿ ಲಿಫ್ಟಿಗೆ ಕಾಯದೇ ಮೆಟ್ಟಿಲಿಳಿದು ಪ್ರೊಫೆಸರರ ಮನೆಯತ್ತ ಓಡಿದೆ. ಬಾಗಿಲಿಗೆ ಬೀಗ ಹಾಕಿದ್ದರೂ ಹುಚ್ಚನಂತೆ ಬಾಗಿಲು ಬಡಿಯತೊಡಗಿದೆ. ನಾನು ಹತಾಶನಾಗಿದ್ದೆ. ಸುತ್ತಮುತ್ತಲಿನ ಮನೆಗಳ ಕಡೆ ನೋಡಿದೆ. ಯಾರೂ ಕಾಣಿಸಲಿಲ್ಲ. ಪ್ರೊಫೆಸರರು ದಿನವೂ ಬೆಳಿಗ್ಗೆ ಟೀ ಕುಡಿದು ಸಿಗರೇಟು ಸೇದಿ ಹೋಗುತಿದ್ದ ಕಾಕಾನ ಅಂಗಡಿಯ ಬಳಿಗೆ ಸರಸರನೆ ನಡೆದು "ಪ್ರೊಫೆಸರರು ಬೆಳಿಗ್ಗೆ ಟೀ ಕುಡಿಯಲು ಬಂದಿದ್ದರೇ..." ಎಂದು ವಿಚಾರಿಸಿದೆ. ಪ್ರತಿದಿನ ಬರುತ್ತಿದ್ದರು, ಇಂದು ಬೆಳಗ್ಗೆ ಬಂದಿಲ್ಲವೆಂಬ ಉತ್ತರ ದೊರಕಿ ನಾನು ಇನ್ನಷ್ಟು ಕಂಗಾಲಾದೆ. ಭರವಸೆ ಕಳೆದುಕೊಳ್ಳದೇ ಪ್ರೊಫೆಸರರು ಪ್ರತಿದಿನ ಹೋಗುತ್ತಿದ್ದ ಬಾರಿನ ಒಳಗೆ ಹೋಗಿ ಅವರ ಪರಿಚಯದ ವೇಟರನನ್ನು ಕೇಳಿದೆ. "ಪ್ರೊಫೆಸರರು ಯಾಕೋ ಎರಡು ದಿನದಿಂದ ಇತ್ತ ಸುಳಿದಿಲ್ಲ..." ಎಂಬ ಅವನ ಉತ್ತರದಿಂದ ನನಗೆ ತೀವ್ರ ಆತಂಕವಾಯಿತು. ಇದ್ದ ಒಂದು ಭರವಸೆಯೂ ಇಲ್ಲದಾಯಿತು.

ಏನೂ ಮಾಡಲು ತೋಚದೇ ನಿಸ್ಸಹಾಯಕನಾಗಿ ಕಾಲೆಳೆದುಕೊಂಡು ಫ್ಲ್ಯಾಟಿಗೆ ಬಂದೆ.

ನೆಲದ ಮೇಲೆ ನಿರ್ಜೀವವಾಗಿ ಮಲಗಿದ್ದ ನನ್ನ ಪ್ರೀತಿಯ ವಸುಂಧರೆಯನ್ನು ನೋಡಿ, ನನ್ನ ವಸುಂಧರೆ ಯಂತ್ರವಲ್ಲ... ಅವಳಿಗೊಂದು ಆತ್ಮವಿದೆ ಎನಿಸಿದ ತಕ್ಷಣವೇ ಅವಳನ್ನು ಎತ್ತಿಕೊಂಡು ಹೋಗಿ ಹಾಸಿಗೆಯ ಮೇಲೆ ಮಲಗಿಸಿ ದೇವರ ಮನೆಯಲ್ಲಿದ್ದ ಎರಡು ದೀಪಗಳನ್ನು ಹತ್ತಿಸಿ, ಆಕೆಯ ಕಾಲುಗಳ ಕೆಳಗೆ ನೆಲದ ಮೇಲಿಟ್ಟು ಗೋಡೆಗೊರಗಿ ಕುಳಿತೆ.

ರಾತ್ರಿಯೆಲ್ಲಾ ನಿದ್ರೆಯಿಲ್ಲದೆ ನಾನು ಬಸವಳಿದುಹೋಗಿದ್ದೆ. ಬೆಳಗ್ಗೆ ಹೇಗಾಯಿತೆಂದು ತಿಳಿಯಲಿಲ್ಲ. ನನ್ನ ಕೈಕಾಲುಗಳು ಸೋತುಹೋಗಿದ್ದವು. ಆತಂಕದಿಂದ ಜ್ವರ ಬಂದಂತಾಗಿತ್ತು. ಹೊಟ್ಟೆಯೂ ಹಸಿಯುತ್ತಿಲ್ಲ. ಮತ್ತೆ ಪ್ರೊಫೆಸರರಿಗೆ ಪದೇ ಪದೇ ಫೋನು ಮಾಡಿದೆ. ಅವರ ಫೋನು ರಿಂಗಾಗಲಿಲ್ಲ. ಮತ್ತೆ ಅವರ ಮನೆಯ ಬಳಿಗೆ ಹೋದೆ. ಉಪಯೋಗವಾಗಲಿಲ್ಲ. ಮನೆಯ ಬಾಗಿಲಿಗೆ ಬೀಗ ಬಿದ್ದಿತ್ತು.

ಕಾರ್ಖಾನೆಗೂ ಹೋಗದೆ, ಆರೋಗ್ಯ ಸರಿಯಿಲ್ಲ ಎಂದು ಹೇಳಿ ರಜೆ ಹಾಕಿ ವಸುಂಧರೆಯ ಎದುರು ಗೋಡೆಗೊರಗಿ ಕುಳಿತೆ.

ಮಧ್ಯಾಹ್ನದ ಹೊತ್ತಿಗೆ ನನ್ನ ಮೊಬೈಲ್ ಫೋನು ಬೀಪ್ ಸದ್ದು ಮಾಡಿ ಇ–ಮೇಲ್ ಬಂದದ್ದನ್ನು ತಿಳಿಸಿತು. ಇ–ಮೇಲ್ ತೆರೆದು ನೋಡಿದೆ. ಪ್ರೊಫೆಸರರು ಬರೆದಿದ್ದರು. ನಡುಗುತ್ತಿದ್ದ ಕೈಗಳಿಂದ ಮೊಬೈಲ್ ಹಿಡಿದುಕೊಂಡು ತೀವ್ರ ಆತಂಕದಿಂದ ಓದತೊಡಗಿದೆ.

ಪ್ರೀತಿಯ ವಿಶಾಲ್,

ನನ್ನನ್ನು ಕ್ಷಮಿಸಿಬಿಡು. ನನ್ನ ಸಂಶೋಧನೆ ಸಂಪೂರ್ಣವಾಗಿ ವಿಫಲವಾಗಿದೆ. ನಾನು ಒಂಟಿತನ ಅನುಭವಿಸುತ್ತಿರುವ ಮಾನವರಿಗಾಗಿ ಕೃತಕ ಸಂಗಾತಿಯನ್ನು ನೀಡಲೆಂದು ರೋಬೋವನ್ನು ರೂಪಿಸಿದೆ. ಆದರೆ ನನ್ನ ಸಂಶೋಧನೆಯನ್ನು ನಿನ್ನ ಸಹಾಯದಿಂದ ಪ್ರಾಯೋಗಿಕವಾಗಿ ಪರೀಕ್ಷೆಗೆ ಒಳಪಡಿಸಿದಾಗ, ಅದು ನನ್ನ ಉದ್ದೇಶಕ್ಕೆ ವಿರುದ್ಧವಾದ ಪರಿಣಾಮ ಬೀರುತ್ತದೆಂದು ಮನದಟ್ಟಾಯಿತು. ನಾನು ಮಾನವಕುಲದ ವಿನಾಶಕ್ಕೆ ಕಾರಣನಾಗುತ್ತೇನೆಂಬ ಭೀತಿಯುಂಟಾಯಿತು. ಇದರಿಂದಾಗಿ ನಾನು ರೋಬೋನ ಎಲ್ಲಾ ತಂತ್ರಾಂಶಗಳನ್ನೂ ಮನೆಯಲ್ಲಿಯೇ ಕುಳಿತು ದೂರದಿಂದಲೇ ನಿಷ್ಕ್ರಿಯಗೊಳಿಸಿದೆ. ಈಗ ಅದು ಬರೀ ಲೋಹಗಳ ಮೇಲೆ ಹೊದಿಕೆಯಿರುವ ಮಾನವ ರೂಪದ ಬೊಂಬೆ. ಯಾರೂ ಈ ಜಗತ್ತಿನಲ್ಲಿ ಅದನ್ನು ಪುನಶ್ಚೇತನಗೊಳಿಸಲಾರರು. ನನ್ನ ಮೇಲೆ ನಿನಗೆ ಗೌರವವಿದ್ದರೆ ಅದನ್ನು ಮತ್ತೆ ಜೀವಂತಗೊಳಿಸುವ ವ್ಯರ್ಥ ಪ್ರಯತ್ನಕ್ಕೆ ದಯವಿಟ್ಟು ಕೈ ಹಾಕಬಾರದು. ನನ್ನ ಈ ಸಂಶೋಧನೆಯ